ನೃತ್ಯಪ್ರಕಾರವು ನನ್ನನ್ನು ಇಲ್ಲಿಯವರೆಗೆ ಕರೆದುತಂದಿದೆ ನೋಡಿ.

◆ **ಕಲಿಕೆಯ ಹಾದಿ ಮಾಗುತ್ತಿದ್ದಂತೆಯೇ ನರ್ತಿಸುವ ಖುಷಿಯು ನಿಮಗೆ ಲಭ್ಯವಾದುದು ಯಾವಾಗ?**

ನಾನು ರಾಮ್‌ಗೋಪಾಲ್ ಡಾನ್ಸ್ ಕಂಪನಿಗೆ ಸೇರಿ, ಕಥಕ್ ಏಕವ್ಯಕ್ತಿ ಪ್ರದರ್ಶನ ನೀಡುತ್ತಿದ್ದೆ. ಆ ನೃತ್ಯಗಳನ್ನು ರಾಮ್‌ಗೋಪಾಲ್ ಅವರೇ ಕೊರಿಯೊಗ್ರಾಫ್ ಮಾಡುತ್ತಿದ್ದರು. ಕಥಕ್ ಭಂಗಿ, ಚಲನೆಗಳನ್ನು ಸಂಯೋಜಿಸಿ ನಿಧಾನ ಗತಿಯಲ್ಲಿ ಪ್ರಸ್ತುತಪಡಿಸುವ ನೃತ್ಯ ಅದು. ಹಾಗೆ ನೃತ್ಯದಲ್ಲಿ ಮುಳುಗಿಹೋಗಿದ್ದ ನನಗೆ, ಹೆಜ್ಜೆ ಹಾಕುತ್ತಿದ್ದಾಗ ಇದ್ದಕ್ಕಿದ್ದಂತೆಯೇ ಹೊಸ ಅರ್ಥಗಳು ಗೋಚರಿಸಿ ರೋಮಾಂಚನವಾದುದು ನೆನಪಿದೆ. ಆ ಕ್ಷಣದ ಬಳಿಕ ನನಗೆ ಕಥಕ್ ಎಷ್ಟೊಂದು ಇಷ್ಟವಾಯಿತೆಂದರೆ, ಮತ್ತೆಂದೂ ನಾನು ಕಥಕ್‌ನಿಂದ ದೂರ ಸರಿಯಲೇ ಇಲ್ಲ. ವ್ಯಕ್ತಿಯು ಹಲವಾರು ಮಂದಿ ಶಿಕ್ಷಕರ ಬಳಿ ಪಾಠ ಹೇಳಿಸಿಕೊಳ್ಳಬಹುದು. ಆದರೆ ಮನಸ್ಸು ಮತ್ತು ದೇಹವನ್ನು ನೃತ್ಯದಲ್ಲಿ ಅನುಸಂಧಾನ ನಡೆಸಿ ನಮ್ಮನ್ನು ಪರಮಾನಂದದ ಕಡೆಗೆ ಕೊಂಡೊಯ್ಯುವಂತೆ ದಾರಿ ತೋರುವವರೇ ನಿಜವಾದ ಗುರುಗಳು.

◆ **ಬೇರೆ ಕಲಾಪ್ರಕಾರಗಳ ಕಡೆಗೆ ನಿಮ್ಮ ಆಸಕ್ತಿ ಹೊರಳಿದ್ದಿದೆಯೇ?**

ಅಪ್ಪ ಎಂಜಿನಿಯರ್ ಆಗಿದ್ದುದರಿಂದ ಅವರು ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಅನೇಕ ಮಂದಿ ವಾಸ್ತುಶಿಲ್ಪಿಗಳು ಇದ್ದರು. ಅವರು ಬಿಡಿಸುತ್ತಿದ್ದ ನಕಾಶೆಗಳನ್ನು ಕುತೂಹಲದಿಂದ ನೋಡುತ್ತಿದ್ದೆ. ಆ ವಿನ್ಯಾಸಗಳನ್ನು ಆಸ್ಥೆಯಿಂದ ಗಮನಿಸುತ್ತಿದ್ದೆ. ನಂತರದ ದಿನಗಳಲ್ಲಿ ಅಂದರೆ ನಾನು ರಜನಿ ಲಾಖಿಯಾ ಅವರನ್ನು ಮದುವೆಯಾಗಿ ಅಹಮದಾಬಾದ್‌ನಲ್ಲಿ ನೆಲೆಸಿದ ಬಳಿಕ ನನಗೆ ಸ್ಕೂಲ್ ಆಫ್ ಆರ್ಕಿಟೆಕ್ಚರ್‌ನಲ್ಲಿ ತರಗತಿಗಳನ್ನು ತೆಗೆದುಕೊಳ್ಳುವಂತೆ ತಂದೆಯ ಸ್ನೇಹಿತರೊಬ್ಬರು ಸೂಚಿಸಿದರು. ಅರರೆ... ನಾನು ವಾಸ್ತುಶಿಲ್ಪ ಕಲಿಕೆಯ ಕಾಲೇಜಿನಲ್ಲಿ ಏನು ಪಾಠ ಮಾಡಲಿ ಎಂದು ಅಚ್ಚರಿಪಟ್ಟೆ. ಅವರು ಕಲಾ ಇತಿಹಾಸ, ನೃತ್ಯ ಇತಿಹಾಸದ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿಕೊಡುವಂತೆ ಸೂಚಿಸಿದರು. ವಾಸ್ತುಶಿಲ್ಪದ ವಿದ್ಯಾರ್ಥಿಗಳಿಗೆ ಸೌಂದರ್ಯಪ್ರಜ್ಞೆಯ ಅರಿವು ದೊರೆಯುವಂತೆ ಮಾಡುವುದು ಇದರ ಉದ್ದೇಶವಾಗಿತ್ತು. ನಾನು ಈ ಅವಕಾಶವನ್ನು ವಿಸ್ತರಿಸಿಕೊಂಡು ಭಾರತದ ವೈವಿಧ್ಯಮಯ ಜನಪದ ಕಲಾಪ್ರಕಾರಗಳನ್ನೂ, ಅವು ವಿಕಾಸ ಹೊಂದಿದ ಬಗೆಯನ್ನೂ ತಿಳಿಸಿಕೊಡುತ್ತಲಿದ್ದೆ. ಅಷ್ಟೇ ಅಲ್ಲ, ಕೆಲವೆಡೆಗಳಲ್ಲಿ ಜನಪದ ಕಲೆಯನ್ನು ನೋಡುವ, ಕಲಾವಿದರೊಂದಿಗೆ ಮಾತನಾಡುವ ಅವಕಾಶಗಳನ್ನು ಹುಡುಕಿ, ಅಲ್ಲಿಗೆ ವಿದ್ಯಾರ್ಥಿಗಳ ತಂಡದೊಡನೆ ತೆರಳುತ್ತಿದ್ದೆ. ಕಲಾವಿದರ ಮನೆಯಲ್ಲಿಯೇ



ಉಳಿದುಕೊಂಡು ಅವರ ಬದುಕಿನ ಶೈಲಿಯನ್ನು, ಕಲಾಪ್ರಕಾರಗಳನ್ನೂ ತಿಳಿದುಕೊಳ್ಳುತ್ತಿದ್ದೆ. ನಾನು ಶಿಕ್ಷಕಿಯೆಂಬುದನ್ನು ಮರೆತು ವಿದ್ಯಾರ್ಥಿಗಳೊಡನೆ ವಿದ್ಯಾರ್ಥಿಯಾಗಿಯೇ ಅಲೆಯುತ್ತಿದ್ದೆ. ಆಹಾ... ಅವು ಎಷ್ಟೊಂದು ಸುಂದರ ದಿನಗಳಾಗಿದ್ದವು!

◆ **ಅಂತರರಾಷ್ಟ್ರೀಯ ವೇದಿಕೆಯಲ್ಲಿ ಕಥಕ್ ಪ್ರಸ್ತುತಪಡಿಸಿದ ಅನುಭವ ಹೇಗಿತ್ತು?**

ನಾನು ನೃತ್ಯ ಪ್ರಸ್ತುತಿಗಾಗಿ ಎರಡು ಬಾರಿ ರಾಮ್ ಗೋಪಾಲ್ ಅವರೊಡನೆ ಕೆಲಸ ಮಾಡಿರುವೆ. ಒಂದು ಬಾರಿ ಮೂರು ವರ್ಷಗಳ ಕಾಲ ಮತ್ತು ಎರಡನೆಯ ಬಾರಿ ಎರಡು ವರ್ಷಗಳ ಕಾಲ ಕೆಲಸ ಮಾಡಿರುವೆ. ನಾನು ಮೊತ್ತ ಮೊದಲು